# ಸ್ವಾಮಿ ಕಲ್ಯಾಣಾನಂದ

**ಕೊಲ್ಕಟದ ಉದ್ಬೋಧನ ಕಾರ್ಯಾಲಯದಿಂದ ಪ್ರಕಟವಾಗಿರುವ 'ಸ್ವಾಮೀಜೀರ್ ಪದಪ್ರಾಂತೇ' ಎಂಬ ಬಂಗಾಳಿ ಗ್ರಂಥದಲ್ಲಿ ಬರುವ ಸ್ವಾಮಿ ಕಲ್ಯಾಣಾನಂದರ ಜೀವನ ಚರಿತ್ರೆಯ ಸಂಗ್ರಹಾನುವಾದ ಮಾಡಿದವರು ಬೆಂಗಳೂರು ರಾಮಕೃಷ್ಣ ಮಠದ ನಿಕಟ ಭಕ್ತರಾದ ವಿ.ಮೀನಾ ಅವರು.**

'ಜೀವನಲ್ಲಿ ಶಿವನನ್ನು ಕಂಡು ಸೇವೆ ಮಾಡು' ಎಂದ ಸ್ವಾಮಿ ವಿವೇಕಾನಂದರ ಆದರ್ಶವನ್ನು ತಮ್ಮ ನಿತ್ಯಜೀವನದಲ್ಲಿ ಅಕ್ಷರಶಃ ಪಾಲಿಸಿದವರು ಸ್ವಾಮಿ ಕಲ್ಯಾಣಾನಂದರು. ಇವರ ಜೀವನ ಚರಿತ್ರೆ ರಾಮಕೃಷ್ಣ ಸಂಘದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದು. ಇವರ ಪೂರ್ವಾಶ್ರಮದ ನಾಮಧೇಯ ದಕ್ಷಿಣಾರಂಜನ ಗುಹಾ. ೧೮೭೪ರಲ್ಲಿ ಬರಿಸಾಲ್ ಜಿಲ್ಲೆಯ ಹನುನಾ ಎಂಬ ಸಣ್ಣ ಗ್ರಾಮದಲ್ಲಿ ಬಡದಂಪತಿಗಳ ಶಿಶುವಾಗಿ ಜನಿಸಿದರು. ತಂದೆ ತಾಯಿಗಳು ಬಡವರಾದರೂ ಬಹು ಗೌರವಾನ್ವಿತರು. ಚಿಕ್ಕ ವಯಸ್ಸಿನಲ್ಲಿ ತಂದೆ ಮರಣ ಹೊಂದಲು, ದೊಡ್ಡಪ್ಪನವರ ನೇತೃತ್ವದಲ್ಲಿ ದಕ್ಷಿಣಾರಂಜನರು ಬೆಳೆದರು. ಇವರ ತಾಯಿ ಅತ್ಯಂತ ಭಕ್ತಿಮತಿ. ಕೇವಲ ಒಂದೇ ಮಗುವಾದ ದಕ್ಷಿಣಾರಂಜನರನ್ನು ಅತ್ಯಂತ ಪ್ರೀತಿಯಿಂದ ಸಲಹಿದರು ; ಶ್ರದ್ಧಾಭಕ್ತಿಗಳು, ದಯಾದಾಕ್ಷಿಣ್ಯ, ಪರೋಪಕಾರ ಮುಂತಾದ ದಿವ್ಯಗುಣಗಳನ್ನು ಬಾಲಕನು ರೂಢಿಸಿಕೊಳ್ಳುವಂತೆ ಮಾಡಿದರು.

'ಪ್ರವೇಶಿಕಾ'ವರೆಗೆ ವಿದ್ಯಾಲಯದಲ್ಲಿ ಓದಿದ ದಕ್ಷಿಣಾರಂಜನರಿಗೆ ಲೌಕಿಕವಿದ್ಯೆಯಲ್ಲಿ ಆಸಕ್ತಿ ಕಡಮೆ. ಕೇವಲ ಧರ್ಮಗ್ರಂಥಗಳನ್ನೇ ಓದುವುದರಲ್ಲಿ ನಿರತರಾದರು. ಸುರೇಶ್‌ಚಂದ್ರರು ರಚಿಸಿದ 'ಶ್ರೀರಾಮಕೃಷ್ಣ ಉಪದೇಶ' ಎಂಬ ಪುಸ್ತಕವನ್ನೂ ಓದಿದರು. ಸತ್ಯದ ಕಡೆಗೇ ಹೆಚ್ಚು ಗಮನವೀಯಲಾರಂಭಿಸಿದರು. ಆ ಸಮಯದಲ್ಲೇ ವಿವೇಕಾನಂದ ಸ್ವಾಮಿಗಳ ಜಯವಾರ್ತೆ ಎಲ್ಲೆಲ್ಲೂ ಹರಡಿ, ಅವರ ವಾಣಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತಿತ್ತು. ಅದನ್ನೆಲ್ಲಾ ಅತ್ಯಂತ ಶ್ರದ್ಧೆಯಿಂದ ದಕ್ಷಿಣಾರಂಜನರು ಓದುತ್ತಿದ್ದರು. ಇದರ ಪ್ರಭಾವದಿಂದಾಗಿ ಸಂಸಾರದಲ್ಲಿ ವಿರಕ್ತಿ, ಭಗವಂತನಲ್ಲಿ ಅನುರಕ್ತಿ ಹೆಚ್ಚಾಯಿತು. ೧೮೯೭ರಲ್ಲಿ ಸರ್ವಸಂಗ ಪರಿತ್ಯಾಗ ಮಾಡಿ ರಾಮಕೃಷ್ಣ ಸಂಘಕ್ಕೆ ಸೇರಿದರು. ಆಗ ಮಠ ನೀಲಾಂಬರ ಬಾಬುವಿನ ಬಾಡಿಗೆ ಮನೆಯಲ್ಲಿತ್ತು. ವಿವೇಕಾನಂದ ಸ್ವಾಮಿಗಳೂ ಆಗ ಅಲ್ಲೇ ನೆಲೆಸಿದ್ದರು. ಯಾರನ್ನು ಕುರಿತು ಕೇವಲ ಆಲಿಸಿದ್ದರೋ ಅವರ ಪ್ರತ್ಯಕ್ಷ ದರ್ಶನ ಭಾಗ್ಯವೀಗ ಒದಗಿದೆ. ಇದರಿಂದಾಗಿ ಅತ್ಯಂತ ಆನಂದಿತರಾದ ದಕ್ಷಿಣಾರಂಜನರು ಶ್ರೀರಾಮಕೃಷ್ಣರ ಇತರ ಪ್ರತ್ಯಕ್ಷ ಶಿಷ್ಯರನ್ನೂ ಕಂಡು ಅವರ ಮಾರ್ಗದರ್ಶನದಲ್ಲಿ ತಮ್ಮ ಜೀವನವನ್ನು ಸುಂದರವಾಗಿ ರೂಪಿಸಿಕೊಳ್ಳ ತೊಡಗಿದರು. ಹಳ್ಳಿಯ ಸರಳ, ಮುಗ್ಧ ಶಿಷ್ಯರಾದ ದಕ್ಷಿಣಾರಂಜನರನ್ನು ಪರೀಕ್ಷಿಸುವ ಸಲುವಾಗಿ ಸ್ವಾಮಿ ವಿವೇಕಾನಂದರು ಒಂದು ದಿನ, 'ನೋಡು, ಒಂದು ವೇಳೆ ನನಗೆ ಹಣದ ಅವಸರ ಉಂಟಾದಾಗ, ನಿನ್ನನ್ನು ಸರ್ವೆ ತೋಟದ ಯಜಮಾನನಿಗೆ ಮಾರುತ್ತೇನೆ. ನೀನದಕ್ಕೆ ಒಪ್ಪುವೆಯಾ?' ಎಂದು ಕೇಳಿದರು. ತತ್‌ಕ್ಷಣ ದಕ್ಷಿಣಾರಂಜನರು ಸಂತೋಷದಿಂದ ತಮ್ಮ ಸಮ್ಮತಿ ಯನ್ನು ಸೂಚಿಸಿದರು. ಸ್ವಾಮಿ ವಿವೇಕಾನಂದರು ಆತನ ಗುರು ಭಕ್ತಿಯನ್ನು ಪ್ರಶಂಸೆ ಮಾಡಿದರು. ತಮ್ಮ ಪ್ರಿಯಶಿಷ್ಯನ ವಿವೇಕ, ವೈರಾಗ್ಯ, ಶಮದಮಾದಿ ಸುಗುಣಗಳು, ಶ್ರದ್ಧಾಭಕ್ತಿಗಳು, ಸೇವಾ ಪರಾಯಣತೆಯನ್ನು ಕಂಡು ಆನಂದಿಸಿ ಆತನಿಗೆ ಸಂನ್ಯಾಸ ದೀಕ್ಷೆಯನ್ನು ಇತ್ತು ಸ್ವಾಮಿ ಕಲ್ಯಾಣಾನಂದ ಎಂಬ ನಾಮಧೇಯದಿಂದ ಕರೆದರು.

ಬಾಲ್ಯಕಾಲದಿಂದಲೇ ಸೇವಾಪರಾಯಣರಾದ ಕಲ್ಯಾಣಾನಂದರು ಕೇವಲ ಮಠವಾಸಿಗಳಲ್ಲದೆ ಸುತ್ತ ಮುತ್ತಲ ಹಳ್ಳಿಯವರಿಗೂ ಸೇವೆ ಮಾಡುತ್ತಿದ್ದರು. ೧೮೯೯ರಲ್ಲಿ ತೀರ್ಥಯಾತ್ರೆಗಾಗಿ ಕಾಶೀಕ್ಷೇತ್ರಕ್ಕೆ ಬಂದರು. ಅಲ್ಲಿ ಕೇದಾರನಾಥ ಮಾಲಿಕ್ (ಮುಂದೆ ಸ್ವಾಮಿ ಅಚಲಾನಂದರು) ಎಂಬ ಆದರ್ಶವಾದಿಯ ಮನೆಯಲ್ಲಿ ಅತಿಥಿಯಾಗಿ ಇದ್ದರು. ಕಲ್ಯಾಣಾನಂದ ಸ್ವಾಮಿಗಳ ವೈರಾಗ್ಯಪೂರ್ಣಜೀವನದಿಂದ ಸ್ಫೂರ್ತಿಪಡೆದ ಕೇದಾರನಾಥ ಹಾಗೂ ಆತನ ಮಿತ್ರರು ದಿವ್ಯ ಜೀವನಕ್ಕೆ ಆಕರ್ಷಿತರಾದರು. ಚಾರುಚಂದ್ರರೆಂಬ ಇವರ ಸ್ನೇಹಿತರೂ ಮುಂದೆ ರಾಮಕೃಷ್ಣ ಸಂಘದಲ್ಲಿ ಶುಭಾನಂದ ಸ್ವಾಮಿಗಳೆಂದು ಖ್ಯಾತರಾದರು.

ಕಾಶಿಯಿಂದ ಪ್ರಯಾಗ ಕ್ಷೇತ್ರಕ್ಕೆ ಬಂದ ಕಲ್ಯಾಣಾನಂದರು ಅಲ್ಲಿ ಎದುರಾದ ರೋಗಿಗಳಿಗೆ, ವೃದ್ಧರಿಗೆ,ಸೇವೆ ಮಾಡಿದರು. ಅಲ್ಲಿ ಒಂದು ಅನಾಥ ಬಾಲಿಕ ಆಶ್ರಮಕ್ಕೆ ಸ್ವಾಮಿ ವಿವೇಕಾನಂದರ ಆದರ್ಶವನ್ನು ಹೇಳಿ ಮಕ್ಕಳನ್ನು ಸಾಕ್ಷಾತ್ ಭಗವತ್ ಸ್ವರೂಪರೆಂದು ಭಾವಿಸುವಂತೆ ಮಾಡಿದರು. ಅಲ್ಲಿಂದ ಜಯಪುರಕ್ಕೆ ಹೊರಟರು, ರೈಲು ನಿಲ್ದಾಣದಲ್ಲಿ ಸ್ವಾಮಿ ಸ್ವರೂಪಾನಂದರನ್ನು ಭೇಟಿಮಾಡಿದರು. ಇಬ್ಬರೂ ಸೇರಿ ಮುಂದೆ ಹೋಗುವುದಾಗಿ ತೀರ್ಮಾನಿಸಿದರು. ಆದರೆ ಕಿಷನ್ ಗಡದಲ್ಲಿ ಜನರೆಲ್ಲಾ ಕ್ಷಾಮದಿಂದ ಪೀಡಿತರಾಗಿ ಮೃತ್ಯುವಶರಾಗುತ್ತಿದ್ದ ವೇದನಾ ಪೂರ್ಣ ದೃಶ್ಯದಿಂದ ಸಂನ್ಯಾಸಿದ್ವಯರ ಹೃದಯ ಕರಗಿಹೋಯಿತು. ಅದರ ನಿವಾರಣೆಗಾಗಿ ಕಾರ್ಯವನ್ನು ಪ್ರಾರಂಭ ಮಾಡಿಬಿಟ್ಟರು. ಅವರಿಗೆಲ್ಲಾ ಅನ್ನವಸ್ತ್ರಾದಿಗಳನ್ನು ಒದಗಿಸುತ್ತಾ, ಶಿಶುಗಳಿಗೆ, ವೃದ್ಧ ರಿಗೆ ಸೇವೆ ಮಾಡಲಾರಂಭಿಸಿದರು. ಹಣ ಮತ್ತು ಆಹಾರಪದಾರ್ಥಗಳನ್ನು ಭಿಕ್ಷೆಬೇಡಿ ತಂದು ಪ್ರತಿದಿನ ಮುನ್ನೂರಕ್ಕೂ

ಹೆಚ್ಚು ಮಂದಿಗೆ ಉಣಬಡಿಸುತ್ತಿದ್ದರು. ಅವರ ನಿಸ್ವಾರ್ಥ ಸೇವೆಯಿಂದ ಪರಿಸ್ಥಿತಿ ಸುಧಾರಿಸಿತು. ಸ್ವರೂಪಾನಂದರು ಮಾಯಾವತಿಗೆ ತೆರಳಿದರು. ಕಲ್ಯಾಣಾನಂದರೊಬ್ಬರೇ ಆ ಕಾರ್ಯ ಮುಂದುವರೆಸಿದರು. ಆದರೆ ಅವರ ಆರೋಗ್ಯ ಕೆಡಲು ನಿರ್ಮಲಾನಂದ ಮತ್ತು ಆತ್ಮಾನಂದರು ಅವರ ಸಹಾಯಕ್ಕೆ ಬಂದರು. ಅಲ್ಲಿಂದ ಕಲ್ಯಾಣಾನಂದರು ಬೃಂದಾವನಕ್ಕೆ ತೆರಳಿದರು. ೧೯೦೦ರಲ್ಲಿ ಸ್ವಾಮಿ ವಿವೇಕಾನಂದರು ಕಲ್ಯಾಣಾನಂದರನ್ನು ಕುರಿತು ಈ ರೀತಿ ಹೇಳಿದರು: 'ನೋಡು ಕಲ್ಯಾಣ್, ಹರಿದ್ವಾರ, ಹೃಷೀಕೇಶ ಮೊದಲಾದ ಪರ್ವತ ಪ್ರಾಂತಗಳಲ್ಲಿ ತಪಸ್ಸು ಮಾಡುತ್ತಿರುವಂತಹ ವೃದ್ಧರೂ ರೋಗಿಗಳೂ ಅಸಹಾಯಕರೂ ಆದ ಸಾಧುಗಳಿಗಾಗಿ ನೀನೇನಾದರೂ ಮಾಡಬಲ್ಲೆಯಾ?' ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿದ್ದಾಗ ಅಲ್ಲಿನ ಸಾಧುಗಳ ಕಷ್ಟಗಳನ್ನು ಕಣ್ಣಾರೆ ಕಂಡಿದ್ದರು.



ಸ್ವಾಮಿ ಕಲ್ಯಾಣಾನಂದ

ಶ್ರೀಗುರುವಿನ ಆಜ್ಞಾಪಾಲನೆಯೇ ಸರ್ವಶ್ರೇಷ್ಠ ಸಾಧನೆಯೆಂದು ಅರಿತ ಕಲ್ಯಾಣಾನಂದರು ಈ ಮಹಾವ್ರತವನ್ನು ಹೇಗೆ ಪ್ರಾರಂಭಿಸುವುದು ಎಂಬುದರ ಬಗ್ಗೆ ಸ್ವರೂಪಾನಂದರೊಡನೆ ಚರ್ಚಿಸಿ ಸಲಹೆಗಳನ್ನು ಪಡೆಯಲು ಮಾಯಾವತಿಗೆ ಬಂದರು. 'ತನ್ನ ಕೈಯಲ್ಲಾದ ಸಹಾಯವನ್ನು ಮಾಡುವೆ' ಎಂದು ಸ್ವರೂಪಾನಂದರು ಅವರನ್ನು ಪ್ರೋತ್ಸಾಹಿಸಿದರು. ಇಬ್ಬರೂ ಸೇರಿ ನೈನಿತಾಲಿಗೆ ಹೋಗಿ ಹಣ ಸಂಗ್ರಹ ಮಾಡಿದರು. ಇಬ್ಬರೂ ಸೇರಿ ಕಾರ್ಯಪ್ರಣಾಲಿಯನ್ನೂ ರಚಿಸಿದರು. ಹಿಮಾಲಯ ಪಾದಪ್ರದೇಶವಾದ ಹರಿದ್ವಾರ ಶ್ರೇಷ್ಠ ತೀರ್ಥಸ್ಥಳ. ಇದಕ್ಕೆ ಹತ್ತಿರವೇ ಹೃಷೀಕೇಶ. ಅಲ್ಲಿ ಬಹು ಮಂದಿ ಸಾಧುಗಳು ತಪಸ್ಸನ್ನಾಚರಿಸುತ್ತಾ ಇರುತ್ತಾರೆ.

ಹರಿದ್ವಾರದಲ್ಲಿರುವ 'ಕನ್‌ಖಲ್' ಪ್ರದೇಶದಲ್ಲಿ ತಮ್ಮ ಸೇವಾಕೇಂದ್ರವನ್ನು ಪ್ರಾರಂಭಿಸಲು ಕಲ್ಯಾಣಾನಂದರು ನಿಶ್ಚಯಿಸಿದರು. ೧೯೦೧, ಜೂನ್‌ನಲ್ಲಿ ತಿಂಗಳಿಗೆ ೩ ರೂಪಾಯಿಗಳ ಬಾಡಿಗೆಗೆ ಒಂದು ಮನೆಯನ್ನು ತೆಗೆದುಕೊಂಡು ಸೇವಾಶ್ರಮವನ್ನು ಸ್ಥಾಪನೆ ಮಾಡಿದರು. ಸಾಧುರೋಗಿಗಳ ಹಾಸಿಗೆ, ಔಷಧಿ ಮತ್ತಿತರ ಉಪಯುಕ್ತ ವಸ್ತುಗಳನ್ನು ಇಡುವುದು, ಊಟದ ವ್ಯವಸ್ಥೆ, ಅವರ ನಿವಾಸ, ಎಲ್ಲಾ ಎರಡು ಕೋಣೆಗಳಿದ್ದ ಆ ಮನೆಯಲ್ಲಿಯೇ ಆಗಬೇಕಿತ್ತು. ಇದಲ್ಲದೆ ಹೋಮಿಯೋಪತಿ ಔಷಧಿಯ ಪೆಟ್ಟಿಗೆ ಹೊತ್ತು ದೂರಪ್ರಾಂತದಲ್ಲಿ, ಗುಹೆಗಳಲ್ಲಿ, ಕುಟೀರದಲ್ಲಿ ವಾಸಿಸುವ ಸಾಧುರೋಗಿಗಳ ಸೇವೆಯನ್ನೂ ಮಾಡಿಬರುತ್ತಿದ್ದರು. ವಿಮಲಾನಂದ ಸ್ವಾಮಿಗಳು ಪ್ರಬುದ್ಧಭಾರತದಲ್ಲಿ ಬರೆದ ಮನವಿಯಿಂದಾಗಿ ಹಣ ಸಹಾಯ ಒದಗಿ ಬಂತು. ೧೯೦೧, ಸೆಪ್ಟೆಂಬರ್‌ನಲ್ಲಿ ಆರು ಜನ ಸಾಧುಗಳು ಸೇವಾಶ್ರಮದಲ್ಲಿ ಒಳರೋಗಿಗಳ ಚಿಕಿತ್ಸೆ ಪಡೆದರು. ಹೊರರೋಗಿಗಳ ವಿಭಾಗದಲ್ಲಿ ೩೦ ಜನ ಸಾಧುಗಳು, ೧೮ಜನ ದರಿದ್ರರು—ಒಟ್ಟು ೪೮ ಜನ ರೋಗಿಗಳ ಚಿಕಿತ್ಸೆ ನಡೆಯಿತು.

ಕ್ರಮೇಣ ಹೃಷೀಕೇಶದಲ್ಲೂ ಸೇವಾ ಕಾರ್ಯ ಪ್ರಾರಂಭ ಮಾಡಿದರು. ಆದರೆ ಎರಡೂ ಕಡೆ ಒಬ್ಬರೇ ಕೆಲಸ ಮಾಡುತ್ತಾ ಅವರ ಆರೋಗ್ಯ ಕೆಟ್ಟಿತು. ಅಷ್ಟರಲ್ಲಿ ಕನ್‌ಖಲ್‌ನಲ್ಲಿ ಸೇವಾಕಾರ್ಯ ಬಹಳ ವಿಸ್ತಾರವಾಗಿ ಬೆಳೆಯತೊಡಗಿತು. ಅಲ್ಲಿ ಸ್ಥಾಯಿಯಾಗಿ ಒಂದು ಸೇವಾಶ್ರಮವನ್ನು ಸ್ಥಾಪಿಸಲು ಸಂಕಲ್ಪಿಸಲಾಯಿತು. ಇದಕ್ಕೆ ಜನರ ಸಹಾಯವೂ ಹೆಚ್ಚು ಬೇಕಾಯಿತು. ತಮ್ಮ ಕಾರ್ಯಕ್ರಮಗಳ ಮುಂದಿನ ರೂಪವನ್ನು ಶ್ರೀಗುರುವಿನೊಡನೆ ಚರ್ಚಿಸಲು ಹಾಗೂ ಅವರ ದರ್ಶನಾಭಿಲಾಶಿಗಳಾಗಿ ಸ್ವಾಮಿ ಕಲ್ಯಾಣಾನಂದರು ಬೇಲೂರು ಮಠಕ್ಕೆ ಬಂದರು. ಅನಾರೋಗ್ಯದಿಂದ ನರಳುತ್ತಿದ್ದ ಶ್ರೀಗುರುವಿನ ಸೇವೆಯನ್ನು ಕಲ್ಯಾಣಾನಂದರು ಆನಂದದಿಂದ ಮಾಡಿದರು. ಸ್ವಾಮಿ ವಿವೇಕಾನಂದರು ಕಲ್ಯಾಣಾನಂದರ ಕಾರ್ಯಚಟುವಟಿಕೆಗಳನ್ನು ಮೆಚ್ಚಿಕೊಂಡು ಮುಂದೆ ಅವರು ಪರಮಹಂಸ ಸ್ಥಿತಿಗೆ ಬರುವರೆಂದು ಆಶೀರ್ವಾದ ಮಾಡಿದರು. ಒಂದು ದಿನ ಕಲ್ಯಾಣಾನಂದರನ್ನು ಕುರಿತು ಸ್ವಾಮೀಜಿ: 'ನೋಡು ಕಲ್ಯಾಣ್, ನನ್ನ ಆಸೆ ಏನೆಂದರೆ, ಆಶ್ರಮದಲ್ಲಿ ಒಂದು ಕಡೆ ಶ್ರೀರಾಮಕೃಷ್ಣರ ದೇವಾಲಯವಿರಬೇಕು. ಅಲ್ಲಿ ಬ್ರಹ್ಮಚಾರಿಗಳು, ಸಾಧುಗಳು ಜಪ ಧ್ಯಾನಾದಿಗಳನ್ನು ಮಾಡಬೇಕು. ಇನ್ನೊಂದು ಕಡೆ ಯಾವುದನ್ನು ಧ್ಯಾನ ಮಾಡುತ್ತಾರೊ ಅದನ್ನು ಕೃತಿಗಿಳಿಸಬೇಕು' ಎಂದರು. ಅವರ ಅಭಿಪ್ರಾಯವೇನಾಗಿತ್ತೆಂದರೆ ವೇದಾಂತ ಕೇವಲ ಸಿದ್ಧಾಂತ ಮಾತ್ರವಲ್ಲ, ಆಚರಣಯೋಗ್ಯವಾದುದು, ಮಾತಿನಲ್ಲಿ ಅಲ್ಲದೆ ಕೃತಿಯಲ್ಲಿ ಅದನ್ನು ವ್ಯಕ್ತಪಡಿಸಬೇಕು ಎಂಬುದು. ಕಲ್ಯಾಣಾನಂದರಿಗೆ ಸ್ವಾಮಿ ವಿವೇಕಾನಂದರು ಹೇಳಿದರು: 'ಪ್ರತಿ ಜೀವಿಯಲ್ಲೂ ಪರಮೇಶ್ವರನಿದ್ದಾನೆ. ಆದ್ದರಿಂದ ಜೀವಸೇವೆ ಪರಮೇಶ್ವರನ ಸೇವೆಯೇ. ಇದರಲ್ಲಿ ಸಂದೇಹವಿಲ್ಲ. ಭಗವದ್ ಬುದ್ಧಿಯಿಂದ ಮಾಡಿದ ಸೇವೆಯಿಂದಾಗಿ ಉನ್ನತ ಆಧ್ಯಾತ್ಮಿಕ ಸ್ಥಿತಿ ಉಂಟಾಗುತ್ತದೆ.' ಈ ಮಾತು ಕಲ್ಯಾಣಾನಂದರ ಹೃದಯವನ್ನು ಆಳವಾಗಿ ಪ್ರವೇಶಿಸಿತು.

ಕನ್‌ಖಲ್‌ಗೆ ವಾಪಸಾದ ಕೆಲವು ದಿನಗಳಲ್ಲೇ ವಿವೇಕಾನಂದರ ಮಹಾಸಮಾಧಿಯ ವಾರ್ತೆ ಕಲ್ಯಾಣಾನಂದರನ್ನು ಶೋಕ ಸಾಗರದಲ್ಲಿ ಮುಳುಗಿಸಿತು. ನಂತರ ಕಲ್ಯಾಣಾನಂದರು ವಂಗದೇಶಕ್ಕೆ ಹೋಗಲೇ ಇಲ್ಲ. ಯಥಾಪ್ರಕಾರ ತೀವ್ರ ಚಟುವಟಿಕೆಯಲ್ಲಿ ನಿರತರಾದ ಅವರ ಆರೋಗ್ಯ ಕ್ಷೀಣಿಸುತ್ತಾ ಬಂತು. ದೈವಯೋಗದಿಂದ ೧೯೦೩ರಲ್ಲಿ ತಮ್ಮ ಗುರುಭಾಯಿಗಳಾದ ನಿಶ್ಚಯಾನಂದರ ಸಾಹಚರ್ಯದಿಂದ ಅವರ ಕೆಲಸ ಸ್ವಲ್ಪ ಕಡಿಮೆಯಾಯಿತು. ಅಲ್ಲಿಂದ ಸುಮಾರು ೩೦ ವರ್ಷಗಳ ಕಾಲ ನಿಶ್ಚಯಾನಂದರೊಡಗೂಡಿ ಕಲ್ಯಾಣಾನಂದರು ಸೇವಾಕಾರ್ಯಗಳನ್ನು ಮುಂದುವರೆಸಿದರು. ಉತ್ತರ ಖಂಡದ ದಶನಾಮೀ ಸಂಪ್ರದಾಯದ ಸಾಧುಗಳು ಇವರೀರ್ವರನ್ನೂ 'ಭಂಗೀ' ಸಾಧುಗಳೆಂದು ಕರೆಯುತ್ತಿದ್ದರು. ಮಲಮೂತ್ರಾದಿಗಳನ್ನು ಸ್ವಚ್ಛಗೊಳಿಸುವುದು ಸರ್ವಸಂಗಪರಿತ್ಯಾಗಿಗಳ ಕೆಲಸವಲ್ಲವೆಂಬುದು ಅವರ ಅಭಿಪ್ರಾಯ. ತಮಗೆ ಖಾಯಿಲೆ ಬಂದಾಗ ಇವರ ಸೇವೆಯನ್ನು

ಹೃತ್ಪೂರ್ವಕ ತೆಗೆದುಕೊಳ್ಳುತ್ತಿದ್ದರು. ಆದರೆ ಇತರರಿಗೆ ಸೇವೆ ಮಾಡುವ ವಿಚಾರ ಬಂದಾಗ 'ಆತ್ಮಾರಾಮ'ರಾಗಿಬಿಡುತ್ತಿದ್ದರು. ಆದರೆ ಹೃಷೀಕೇಶದಲ್ಲಿನ ಕೈಲಾಸ ಮಠದ ಮಂಡಲಾಧೀಶರಾದ ಶ್ರೀಮತ್ ಸ್ವಾಮಿ ಧನರಾಜಗಿರಿ ಮಹಾರಾಜರು ಇವರೀರ್ವರನ್ನೂ ಬಹುವಾಗಿ ಗೌರವಿಸುತ್ತಿದ್ದರು. ಶ್ರೀಮಂತ ಸಹೋದರರಿಬ್ಬರು ಒಂದು ಮಠವನ್ನು ಸ್ಥಾಪಿಸಲು ಧನರಾಜಗಿರಿ ಮಹಾರಾಜ್‌ರವರಿಗೆ ಧನಸಹಾಯ ಮಾಡಲು ಬಂದಾಗ, ಜೀವಸೇವೆಯನ್ನು ಅತ್ಯದ್ಭುತವಾಗಿ ಮಾಡುತ್ತಿರುವ ವಿವೇಕಾನಂದರ ಶಿಷ್ಯದ್ವಯರಿಬ್ಬರಿಗೆ ಈ ದಾನ ಕೊಟ್ಟರೆ ತಾವು ಕೃತಾರ್ಥರಾಗುವೆವೆಂದು ಅವರು ಹೇಳಿದರು. ಅವರಿಬ್ಬರೂ ಕನ್‌ಖಲ್‌ಗೆ ಹೋಗಿ ಶಿಷ್ಯದ್ವಯರ ಸೇವಾಕಾರ್ಯವನ್ನು ನೋಡಿ ವಿಸ್ಮಿತರಾಗಿ, ಸೇವಾಶ್ರಮದ ಸ್ಥಾಯೀ ಕಟ್ಟಡಕ್ಕೆ ಯಥೇಚ್ಛವಾಗಿ ಧನಸಹಾಯ ಮಾಡಿದರು.

೧೯೦೫ರ ಪ್ರಾರಂಭದಲ್ಲಿ ಒಂದು ಶುಭದಿನದಂದು ಹೊಸ ಕಟ್ಟಡದಲ್ಲಿ ಸೇವಾಶ್ರಮದ ಕಾರ್ಯ ಶುರುವಾಯಿತು. ಅದಲ್ಲದೆ ಹರಿಜನರು ವಾಸಿಸುವ ಜಾಗದಲ್ಲಿ 'ರಾತ್ರಿಯ ಶಾಲೆ'ಯನ್ನೂ ತೆರೆದರು. ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೧೫೦ಕ್ಕೂ ಹೆಚ್ಚಾಗಿತ್ತು. ಆಬಾಲವೃದ್ಧರಿಗೆ ಓದಿನ ಮೇಲೆ ಆಸಕ್ತಿ ಉಂಟಾಯಿತು. ಹಗಲೆಲ್ಲಾ ವೈದ್ಯಕೀಯ ಸೇವೆ, ರಾತ್ರಿಯ ವೇಳೆ ವಿದ್ಯಾದಾನ! ಸ್ವಾಮಿ ವಿವೇಕಾನಂದರು ಹೇಳುತ್ತಿದ್ದ 'ಪಾಪಿದೇವೋ ಭವ, ಮೂರ್ಖದೇವೋ ಭವ, ರೋಗಿ ದೇವೋ ಭವ' ಎಂಬ ಆದರ್ಶಗಳನ್ನು ಪ್ರತ್ಯಕ್ಷವಾಗಿ ಆಚರಿಸಿ ತೋರಿದರು ಈರ್ವರು ಸಂನ್ಯಾಸಿಗಳು. ಸ್ವಾಮಿ ವಿವೇಕಾನಂದರ ದಯೆಯೇ ಇವರೀರ್ವರಲ್ಲಿ ಪ್ರವೇಶಿಸಿದಂತಿತ್ತು. ಇದಲ್ಲದೆ ಆಶ್ರಮದ ಸುತ್ತ ಮುತ್ತಲಿದ್ದ ಬಡವರಿಗೆ ಅನ್ನ ವಸ್ತ್ರಾದಿಗಳನ್ನು ಕೊಡುವುದು, ಕಷ್ಟದಲ್ಲಿ ನೆರವಾಗುವುದು, ಗೃಹನಿರ್ಮಾಣಾದಿ ಕಾರ್ಯಗಳಿಗೆ ಧನಸಹಾಯ ಮಾಡುವುದು, ಕುಡಿಯುವ ನೀರಿನ ಭಾವಿಗಳನ್ನು ತೋಡಿಸುವುದು ಮುಂತಾದ ಹಲವಾರು ಸೇವಾ ಕಾರ್ಯಗಳಲ್ಲಿ ನಿರತರಾದರು. ಸೇವಾಶ್ರಮವೇ ತಮ್ಮ ಗುರುವಿನ ವಾಸಸ್ಥಾನವೆಂದು ತಿಳಿದು ಎಲ್ಲವನ್ನೂ ಪೂಜೆಯಂತೆಯೇ ಮಾಡುತ್ತಿದ್ದರು. ಕಲ್ಯಾಣಾನಂದರು ತಮ್ಮ ಗುರುಗಳ ಬಗ್ಗೆ ಒಮ್ಮೆ ಹೀಗೆ ಹೇಳುತ್ತಾರೆ : 'ಅವರನ್ನು ಮಾತಿನಲ್ಲಿ ವರ್ಣಿಸಲಾಗುವುದಿಲ್ಲ. ಅವರ ನೇತ್ರಗಳು ತೇಜಃಪುಂಜಗಳಾಗಿದ್ದವು! ನಾನು ಅವರನ್ನು ತಲೆ ಎತ್ತಿ ನೇರವಾಗಿ ನೋಡುತ್ತಿರಲಿಲ್ಲ. ಅವರ ಎದುರು ನಿಂತು ಮಾತನಾಡಬೇಕಾದರೂ ತಲೆತಗ್ಗಿಸಿ ಮಾತನಾಡುತ್ತಿದ್ದೆ. ಸೂರ್ಯಕಿರಣಕ್ಕೂ ಮೀರಿದ ಪ್ರಕಾಶ! ಅವರ ಧ್ಯಾನವೂ ಅಮೋಘ! ಧ್ಯಾನಮಾಡುವಾಗ ಶಿಲಾಮೂರ್ತಿಯಂತೆ ಆಗಿಬಿಡುತ್ತಿದ್ದರು! ಆಗ ನಾವು ಜೋರಾಗಿ ಉಸಿರಾಡುವುದಕ್ಕೂ ಹೆದರುತ್ತಿದ್ದೆವು, ಎಲ್ಲಿ ಅವರ ಧ್ಯಾನ ಭಂಗವಾಗುವುದೊ ಎಂದು.'

ಚಿಕಿತ್ಸಕರಾಗಿಯೂ ಕಲ್ಯಾಣಾನಂದರು ಪ್ರಸಿದ್ಧರಾಗಿದ್ದರು. ದೀನ ದುಃಖಿಗಳಾದ ಅಸ್ಪೃಶ್ಯರ, ನೀಚಕುಲದವರ ಗಲ್ಲಿಗಳಲ್ಲಿ ಓಡಾಡುತ್ತ ರೋಗಿಗಳನ್ನು ಹುಡುಕಿಕೊಂಡು ಹೋಗುತ್ತಿದ್ದರು ಮತ್ತು ಅವರಿಗೆ ಶುಶ್ರೂಷೆ ಮಾಡುತ್ತಿದ್ದರು. ಸಾಧುಗಳ ಕುಟೀರದಿಂದ ಹಿಡಿದು ಚಂಡಾಲರ ಜೋಪಡಿಯವರೆಗೆ ಸಮಾನ ಮನಸ್ಸಿನಿಂದ ಓಡಾಡುತ್ತ ಆ ಸಂನ್ಯಾಸಿದ್ವಯರು ರೋಗಪೀಡಿತ ವ್ಯಕ್ತಿಗಳ ಮಲಮೂತ್ರಗಳನ್ನು ತಾವೇ ತೊಳೆದು ಶುಚಿಗೊಳಿಸುತ್ತಿದ್ದರು, ಪಥ್ಯವನ್ನು ತಯಾರಿಸಿ ಉಣಬಡಿಸುತ್ತಿದ್ದರು ಮತ್ತು ಔಷಧಿಯನ್ನು ನೀಡಿ ಹಿಂದಿರುಗುತ್ತಿದ್ದರು.

ಕಲ್ಯಾಣಾನಂದರು ಸೇವಾಶ್ರಮವನ್ನು ಒಂದು ನಿಜವಾದ ಆಧ್ಯಾತ್ಮಿಕ ಕೇಂದ್ರವೆಂದು ಪರಿಗಣಿಸುತ್ತಿದ್ದರೇ ಹೊರತು, ಒಂದು ಆಸ್ಪತ್ರೆಯಂತಲ್ಲ. ಒಮ್ಮೆ ಸೇವಾಶ್ರಮದ ಕೆಲಸಗಾರರೊಬ್ಬರು ಬೇರೆ ಆಸ್ಪತ್ರೆಗಳಲ್ಲಿಯಂತೆ ಸೇವಾಶ್ರಮದಲ್ಲಿಯೂ ಕೆಲಸಕ್ಕೆ ನಿರ್ದಿಷ್ಟ ಸಮಯವನ್ನು ನಿಗದಿತಗೊಳಿಸಬೇಕೆಂದು ಕೇಳಿಕೊಂಡಾಗ ಕಲ್ಯಾಣಾನಂದರು ಹೇಳಿದರು : 'ನೋಡು, ನಮ್ಮದು ಆಸ್ಪತ್ರೆಯಲ್ಲ. ಸೇವೆ ಮಾಡಲು ಸ್ವಾಮೀಜಿ ನಮ್ಮನ್ನು ಕಳಿಸಿರುವರು. ಇದು ಸೇವಾಶ್ರಮ. ಇಲ್ಲಿ ಗಡಿಯಾರದಂತೆ ಕೆಲಸ ಮಾಡುವುದು ನಡೆಯುವುದಿಲ್ಲ. ನಮ್ಮದು ಸೇವಾಭಾವ.'

ಸೇವಾಶ್ರಮವನ್ನು ಅವರು ಸಾಧನಕ್ಷೇತ್ರವೆಂದು, ಭಗವದುಪಾಸನೆಯ ಕ್ಷೇತ್ರವೆಂದು ಪರಿಗಣಿಸುತ್ತಿದ್ದರು. ಆದ್ದರಿಂದ ಶುಚಿತ್ವಕ್ಕೆ ಅವರು ಹೆಚ್ಚು ಒತ್ತನ್ನು ನೀಡುತ್ತಿದ್ದರು. ಬಹಳ ಪರಿಶ್ರಮದಿಂದ ಸುಂದರವಾದ ಪುಷ್ಪೋದ್ಯಾನವನ್ನು ಬೆಳಸಿದ್ದರು. ಗಿಡಗಳು ತುಂಬ ಬೆಳೆದು ಸೊಳ್ಳೆಗಳ ಸಂಖ್ಯೆ ಅಧಿಕವಾಗಲು ಕೆಲವರು ಆಕ್ಷೇಪಿಸಿದಾಗ ಕಲ್ಯಾಣಾನಂದರು ಹೇಳಿದರು: 'ಕೆಲವು ಸಮಯದಲ್ಲಿ ಸೊಳ್ಳೆ ಜಾಸ್ತಿಯಾಗುವುದು ಸ್ವಾಭಾವಿಕ. ಹಾಗೆಂದು ಸ್ವಾಮೀಜಿಯವರ ಆಶ್ರಮದಲ್ಲಿ ಹೂವೇ ಇರಬಾರದೆ?'

ಕಲ್ಯಾಣಾನಂದರು ಮೂಲತಃ ಬಹು ಕಠೋರ ಸಂನ್ಯಾಸಿ. ಯಾರಾದರೂ ತಮಗೆ ಒಳ್ಳೆಯ ಶಾಲು, ಬಟ್ಟೆಗಳನ್ನು ಕೊಟ್ಟರೆ ತತ್‌ಕ್ಷಣ ಬಡಬಗ್ಗರಿಗೆ ಕೊಟ್ಟುಬಿಡುತ್ತಿದ್ದರು. ಅತ್ಯಂತ ನಿರಾಡಂಬರ ಜೀವನ ಅವರದಾಗಿತ್ತು. ಕಠೋರ ಪರಿಶ್ರಮದಿಂದಾಗಿ ಅವರು ಜೀವನದ ಕೊನೆಯ ವರ್ಷಗಳಲ್ಲಿ ರೋಗದಿಂದ ನರಳುತ್ತಲೇ ಇದ್ದರು. ಕೊನೆಯಲ್ಲಿ ಅತಿ ಮೂತ್ರ ಖಾಯಿಲೆಗೆ ತುತ್ತಾದರು. ಚಿಕಿತ್ಸೆಗಾಗಿ ಎಲ್ಲಿಗೂ ಹೋಗಲು ಒಪ್ಪಲಿಲ್ಲ. ೧೯೩೨ರಲ್ಲಿ ಮಾಯಾವತಿಯ ಅದ್ವೈತ ಆಶ್ರಮದಲ್ಲಿ ಸ್ವಲ್ಪಕಾಲವಿದ್ದರು. ೧೯೩೪ರಲ್ಲಿ ಅವರ ದೀರ್ಘಕಾಲದ ಸಹಾಯಕರೂ ಪ್ರಿಯ ಗುರುಭಾಯಿಗಳೂ ಆದ ನಿಶ್ಚಯಾನಂದರು ಮಹಾಸಮಾಧಿ ಹೊಂದಿದರು.

೧೯೩೭ರಲ್ಲಿ ಕಲ್ಯಾಣಾನಂದರ ಆರೋಗ್ಯ ಪೂರ್ಣ ಹದಗೆಡಲು ಅವರನ್ನು ಮುಸೌರಿಗೆ ಕರೆತರಲಾಯಿತು. ಎಷ್ಟೇ ಔಷಧೋಪಚಾರ ಮಾಡಿದರೂ ಯಾವುದಕ್ಕೂ ಸರಿಹೋಗದೆ ಹೋಯಿತು. ಪ್ರಸನ್ನವದನರಾದ ಸಂನ್ಯಾಸಿಗಳು ೧೯೩೭ರ ಅಕ್ಟೋಬರ್ ೨೦ರಂದು 'ಮಾ' 'ಮಾ' ಎಂಬ ದಿವ್ಯನಾಮವನ್ನು ಉಚ್ಚರಿಸುತ್ತಾ ತಮ್ಮ ದಿವ್ಯಧಾಮದ ಕಡೆಗೆ ಪ್ರಯಾಣ ಮಾಡಿದರು.

ಈ ರೀತಿಯಲ್ಲಿ ನಿಸ್ವಾರ್ಥಪ್ರೇಮ, ಸೇವೆ, ಭಕ್ತಿ ಎಂಬ ಸುಗಂಧದಿಂದ ತುಂಬಿದ ಆತ್ಮಪದ್ಮವೊಂದು ಶ್ರೀ ಸ್ವಾಮಿ ವಿವೇಕಾನಂದರ ಚರಣಗಳನ್ನು ಅಲಂಕರಿಸಿತು! ❑